ಕರ್ನಾಟಕ ಸರ್ಕಾರ
GOVERNMENT OF KARNATAKA
ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ನಿರ್ದೇಶನಾಲಯ
DIRECTORATE OF E. S. I. S. MEDICAL SERVICES
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010
S.Nijalingappa Road, II Block, RAJAJINAGAR, BANGALORE ಗ 560 010.

http://www.karnataka.gov.in/esisms Tel / Fax:080 - 2332 4216

ಸಂಖ್ಯೆ:ESIS/ಅಭಿವೃದ್ಧಿ/173/19-20 ದಿನಾಂಕ: 24-07-2023

## ಹಿಂಬರಹ

ವಿಷಯ: ಕಾರಾವಿ ಯೋಜನೆಯಡಿ ಬರುವ ವಿಮಾದಾರರ ಹಾಗೂ ಅವರ ಕುಟುಂಬದ ಸದಸ್ಯರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ನು ಪರಿಷ್ಕರಣೆ ಮಾಡಿರುವ ಕುರಿತು.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ: ಕಾಇ 230 ಎಲ್ಎಸ್ಐ 2022, ದಿ: 17-06-2023.

*****

ಉಲ್ಲೇಖಿತ ಸರ್ಕಾರದ ಆದೇಶಪತ್ರವನ್ನು ಈ ಪತ್ರದೊಂದಿಗೆ ಅಡಕಗೊಳಿಸಿ ರವಾನಿಸುತ್ತಾ, ಸದರಿ ಆದೇಶಪತ್ರದಲ್ಲಿ ಸೂಚಿಸಿರುವಂತೆ ಕಾರಾವಿ ಯೋ ವೈ ಸೇವೆಯಡಿಯಲ್ಲಿನ ವಿಮಾದಾರರು ಹಾಗೂ ಅವರ ಕುಟುಂಬದ ಸದಸ್ಯರುಗ ವೈದ್ಯಕೀಯ ವೆಚ್ಚಗಳ ಮರುಪಾವತಿ ಬಿಲ್ಲುಗಳನ್ನು ಮರುಪಾವತಿಸಲು ಪರಿಷ್ಕರಿಸುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಸದರಿ ಸರ್ಕಾರದ ಆದೇಶವನ್ನು ಈ ಇಲಾಖೆಯ ಅಧಿಕೃತ ಜಾಲತಾಣವಾದ https://esisms.karnataka.gov.in/ ರಲ್ಲಿ ಅಪಲೋಡ್ ಮಾಡಲಾಗಿರುತ್ತದೆ.

26/07/23
ನಿರ್ದೇಶಕರು (ಪ್ರ)
ಕಾರಾವಿ ಯೋ ವೈ ಸೇವೆ.

ರವರಿಗೆ,

1. ವೈದ್ಯಕೀಯ ಅಧೀಕ್ಷಕರು, ಎಲ್ಲಾ ಕಾರಾವಿ ಆಸ್ಪತ್ರೆ / ರೋಗ ಪತ್ತೆ ಹಚ್ಚುವ ಕೇಂದ್ರ
2. ಆಡಳಿತ ವಿಮಾ ವೈದ್ಯಾಧಿಕಾರಿಗಳು, ಎಲ್ಲಾ ಕಾರಾವಿ ಚಿಕಿತ್ಸಾಲಯಗಳು
3. ಇ.ಆರ್.ಸಿ. ಸಂಕಲನಗಳು, ಕಾರಾವಿ ನಿರ್ದೇಶನಾಲಯ

ಪ್ರತಿಯನ್ನು

4. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಪ್ರತಿ.

**DEv:/Himbaraha 2023-24**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕಾರ್ಮಿಕರ ರಾಜ್ಯ ವಿಮಾ ಯೋಜನೆಯಡಿ ಬರುವ ವಿಮಾದಾರರ ಹಾಗೂ ಅವರ ಕುಟುಂಬದ ಸದಸ್ಯರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯನ್ನು ಪರಿಷ್ಕರಣೆ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕಾಇ 833 ಎಲ್‌ಎಸ್‌ಐ 2001, ದಿನಾಂಕ: 09-08-2002.
2. ನಿರ್ದೇಶಕರು, ಕಾ.ರಾ.ವಿ.ಯೋ.ವೈ. ಸೇವೆಗಳು ಇವರ ಪತ್ರ ಸಂಖ್ಯೆ: ಅಭಿವೃದ್ಧಿ/173/2022-23, ದಿನಾಂಕ: 20-07-2021(2022).

ಪತ್ರ ಸಂಖ್ಯೆ 219 23 24
19 JUN 2023

*****

**ಪ್ರಸ್ತಾವನೆ:**

ಮೇಲೆ [1] ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆಯಡಿಯಲ್ಲಿ ಬರುವ ವಿಮಾದಾರರು ಹಾಗೂ ಅವರ ಕುಂಟುಂಬ ವರ್ಗದವರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಸಂಬಂಧಿಸಿದ ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯದ ವಿಮಾ ವೈದ್ಯಾಧಿಕಾರಿಗಳಿಗೆ ರೂ.5000/-ರವರೆಗೆ ಮತ್ತು ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರುಗಳಿಗೆ ರೂ.5001/-ಕ್ಕೆ ಮೇಲ್ಪಟ್ಟು ಹಾಗೂ ಉತ್ಕೃಷ್ಟ ಹಾಗೂ ತಜ್ಞ ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದ ವೈದ್ಯಕೀಯ ವೆಚ್ಚವನ್ನು ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರಿಗೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

ಮೇಲೆ [2] ರಲ್ಲಿ ಓದಲಾದ ನಿರ್ದೇಶಕರ ಪ್ರಸ್ತಾವನೆಯಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆಯಡಿಯಲ್ಲಿ ಬರುವ ವಿಮಾದಾರರು ಹಾಗೂ ಅವರ ಕುಂಟುಂಬದ ಸದಸ್ಯರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿರುವ ಸರ್ಕಾರಿ ಆದೇಶವು 20 ವರ್ಷಗಳ ಹಿಂದಿನದಾಗಿದ್ದು, ಹಾಲಿ 2022-23ನೇ ಆರ್ಥಿಕ ವರ್ಷ ಚಾಲ್ತಿಯಲ್ಲಿದ್ದು, ಸರ್ಕಾರದ ಆದೇಶ ಸಂಖ್ಯೆ: ಕಾಇ 833 ಎಲ್‌ಎಸ್‌ಐ 2001, ದಿನಾಂಕ: 09-08-2002 ರ ಷರತ್ತುಗಳಿಗೆ ಒಳಪಟ್ಟು ಪ್ರಸ್ತುತ ಇರುವ ಆರ್ಥಿಕ ಪ್ರತ್ಯಾಯೋಜನೆಯನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶ ಹೊರಡಿಸುವಂತೆ ಕೋರಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ. ಸಂ. | ಮಂಜೂರಾತಿ ಪ್ರಾಧಿಕಾರ | ಹಾಲಿ ಮರುಪಾವತಿ ಮಾಡುತ್ತಿರುವ ಅರ್ಹ ವೈದ್ಯಕೀಯ ವೆಚ್ಚ | ಆರ್ಥಿಕ ಪ್ರತ್ಯಾಯೋಜನೆ ಮಾರ್ಪಾಡು ಮಾಡಬೇಕಾದ ಮರುಪಾವತಿ ಅರ್ಹ ವೈದ್ಯಕೀಯ ವೆಚ್ಚದ ವಿವರ |
|---|---|---|---|
| 1 | ಸಂಬಂಧಿಸಿದ ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯದ ವಿಮಾ ವೈದ್ಯಾಧಿಕಾರಿಗಳು. | ರೂ.5000/-ರವರೆಗೆ | ರೂ.10,000/-ರವರೆಗೆ |
| 2 | ಸಂಬಂಧಿಸಿದ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು. | ರೂ.5001-ಕ್ಕೆ ಮೇಲ್ಪಟ್ಟು | ರೂ.10,001/-ಕ್ಕೆ ಮೇಲ್ಪಟ್ಟು |

ಕಾರ್ಮಿಕರ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳ ಇಲಾಖೆಯ ವಿಮಾದಾರರ ವೈದ್ಯಕೀಯ ವೆಚ್ಚ ಮರುಪಾವತಿಗೆ ಸಂಬಂಧಿಸಿದಂತೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿರುವ ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶವು 20 ವರ್ಷಗಳಿಗೂ ಹಳೆಯದಾಗಿರುವುದನ್ನು ಪರಿಗಣಿಸಿ, ವಿಮಾದಾರರ ಹಾಗೂ ಅವರ ಕುಟುಂಬದ ಸದಸ್ಯರ ಹಿತದೃಷ್ಟಿಯಿಂದ ನಿರ್ದೇಶಕರ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಕಾಇ 230 ಎಲ್ಎಸ್ಐ 2022,**
**ಬೆಂಗಳೂರು, ದಿನಾಂಕ: 17-06-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾರ್ಮಿಕರ ರಾಜ್ಯ ವಿಮಾ ಯೋಜನೆಯಡಿಯಲ್ಲಿ ಬರುವ ವಿಮಾದಾರರು ಹಾಗೂ ಅವರ ಕುಟುಂಬದವರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಅಧಿಕಾರವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪರಿಷ್ಕರಿಸಿ ಈ ಕೆಳಗೆ ನಮೂದಿಸಲಾದ ಅಧಿಕಾರಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪ್ರತ್ಯಾಯೋಜಿಸಲಾಗಿದೆ.

| ಕ್ರ.ಸಂ | ಮಂಜೂರಾತಿ ಪ್ರಾಧಿಕಾರ | ಮರುಪಾವತಿಸಬಹುದಾದ ಅರ್ಹ ವೈದ್ಯಕೀಯ ವೆಚ್ಚ |
|---|---|---|
| 1 | ಸಂಬಂಧಿಸಿದ ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯದ ವಿಮಾ ವೈದ್ಯಾಧಿಕಾರಿಗಳು | ರೂ.10,000/- ರವರೆಗೆ |
| 2 | ಸಂಬಂಧಿಸಿದಂತೆ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು | ರೂ. 10,001/-ಕ್ಕೆ ಮೇಲ್ಪಟ್ಟು |
| 3 | ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು. | ಉತ್ಕೃಷ್ಟ: ತಜ್ಞ ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದ ವೈದ್ಯಕೀಯ ವೆಚ್ಚ |

**ಷರತ್ತುಗಳು:**

1. ವಿಮಾದಾರರ ವೈದ್ಯಕೀಯ ವೆಚ್ಚವನ್ನು ಮರುಪಾವತಿಗೆ ಅರ್ಜಿ ಸಲ್ಲಿಸಿದ ದಿನಾಂಕ ದಿಂದ 30 ದಿನಗಳೊಳಗೆ ಮರುಪಾವತಿ ಮಾಡಬೇಕು. ತಪ್ಪಿದಲ್ಲಿ ಸಂಬಂಧಿಸಿದ ವಿಮಾ ವೈದ್ಯಾಧಿಕಾರಿ: ವೈದ್ಯಕೀಯ ಅಧೀಕ್ಷಕರುಗಳನ್ನು ವಿಳಂಬಕ್ಕೆ ಹೊಣೆಗಾರರನ್ನಾಗಿ ಮಾಡಲಾಗುವುದು.

2. ಕಾರ್ಮಿಕರ ರಾಜ್ಯ ವಿಮಾ ನಿಗಮದ ವೈದ್ಯಕೀಯ ಕೈಪಿಡಿಯಲ್ಲಿ ವೈದ್ಯಕೀಯ ವೆಚ್ಚದ ಮರುಪಾವತಿಗೆ ಸಂಬಂಧಿಸಿದಂತೆ ವಿಧಿಸಲಾಗಿರುವ ಷರತ್ತುಗಳಿಗೊಳಪಟ್ಟು ವೈದ್ಯಕೀಯ ವೆಚ್ಚವನ್ನು ಮರುಪಾವತಿಸತಕ್ಕದ್ದು.

3. ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆಯ ವೈದ್ಯರ ಅನುದಾನ ಪತ್ರದ ಆಧಾರದ ಮೇಲೆ ಹೊಂದಾಣಿಕೆ ಮಾಡಿಕೊಂಡ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಗೆ ಸಂಬಂಧಿಸಿದಂತೆ ಸರ್ಕಾರದ ಅನುಮೋದನೆ ಪಡೆದು ನಿಗದಿಪಡಿಸಲಾಗಿರುವ ಪ್ಯಾಕೇಜ್ ದರದ ಅನುಸಾರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸತಕ್ಕದ್ದು.

4. ಅನಿವಾರ್ಯ ಹಾಗೂ ತುರ್ತ ಪರಿಸ್ಥಿತಿಗಳಲ್ಲಿ ನೇರವಾಗಿ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗಿ ಪಡೆದ ಚಿಕಿತ್ಸೆಗೆ ಸಂಬಂಧಿಸಿದಂತೆ ಅದು ತುರ್ತು ಪ್ರಕರಣವೆ ಎಂದು ಪರಿಗಣಿಸುವ ಸಲುವಾಗಿ ಸಂಬಂಧಿಸಿದ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆಗಳಲ್ಲಿ ವೈದ್ಯಕೀಯ ಅಧೀಕ್ಷಕರ ಆಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸತಕ್ಕದ್ದು. ಸದರಿ ಸಮಿತಿಯಲ್ಲಿ ಪಡೆಯಲಾದ ಚಿಕಿತ್ಸೆಗೆ ಸಂಬಂಧಿಸಿದ ತಜ್ಞ ವೈದ್ಯರು ಇರತಕ್ಕದ್ದು. ತಜ್ಞರ ಸಮಿತಿಯು ತುರ್ತು ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಪಡೆಯಲಾದ ಚಿಕಿತ್ಸೆಗೆ ತಗಲುವ ಅರ್ಹ ವೈದ್ಯಕೀಯ ವೆಚ್ಚದ ಮೊತ್ತವನ್ನು ಸದರಿ ಚಿಕಿತ್ಸೆ ಸರ್ಕಾರಿ ಆಸ್ಪತ್ರೆಯಲ್ಲಿ ಲಭ್ಯವಿದ್ದಲ್ಲಿ ಸರ್ಕಾರಿ ಆಸ್ಪತ್ರೆ ದರದಲ್ಲಿ ಪಾವತಿಸಲು ಒಂದು ವೇಳೆ ಈ ಚಿಕಿತ್ಸೆ ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿಲ್ಲದಿದ್ದಲ್ಲಿ ಹೊಂದಾಣಿಕೆ ಮಾಡಿಕೊಂಡ ಖಾಸಗಿ ಆಸ್ಪತ್ರೆಗಳ ದರದಲ್ಲಿ ಪಾವತಿಸುವ ಬಗ್ಗೆ ನಿರ್ಧರಿಸತಕ್ಕದ್ದು ಹಾಗೂ ಅದರಂತೆ ಅರ್ಹ ವೈದ್ಯಕೀಯ ವೆಚ್ಚಗಳನ್ನು ಮರುಪಾವತಿಸತಕ್ಕದ್ದು. ಉತ್ಕೃಷ್ಟ ಹಾಗೂ ತಜ್ಞ ವೈದ್ಯ ಚಿಕಿತ್ಸೆ ಅಗತ್ಯವಿದ್ದಲ್ಲಿ ಸಮಿತಿ ಈ ಬಗ್ಗೆ ನಿರ್ದಿಷ್ಟ ಶಿಫಾರಸ್ಸನ್ನು ಮಾಡತಕ್ಕದ್ದು.

5. ಅನಿವಾರ್ಯ ಹಾಗೂ ತುರ್ತು ಪ್ರಕರಣಗಳನ್ನು ಹೊರತುಪಡಿಸಿ, ಇತರೆ ಪ್ರಕರಣಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ನೇರವಾಗಿ ದಾಖಲಾಗಿ ಚಿಕಿತ್ಸೆ ಪಡೆದಿದ್ದರೆ ಅವರು ವೈದ್ಯಕೀಯ ವೆಚ್ಚದ ಮರುಪಾವತಿಗೆ ಅರ್ಹರಾಗುವುದಿಲ್ಲ.

6. ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆಗಳಲ್ಲಿ ಲಭ್ಯವಿಲ್ಲದ ಚಿಕಿತ್ಸೆಗಳಿಗೆ ಅನುದಾನ ಪತ್ರದ ಆಧಾರದ ಮೇಲೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಲ್ಲಿ ಸಂಬಂಧಿಸಿದ ವೈದ್ಯಕೀಯ ವೆಚ್ಚವನ್ನು ಸರ್ಕಾರಿ ಆಸ್ಪತ್ರೆ ದರದಲ್ಲಿ ಅಥವಾ ಹೊಂದಾಣಿಕೆ ಮಾಡಿಕೊಳ್ಳಲಾದ ಆಸ್ಪತ್ರೆಗಳಲ್ಲಿ ನಿಗದಿಪಡಿಸಿರುವ ದರದನುಸಾರ ಯಾವುದು ಕಡಿಮೆಯೋ ಆ ದರದಲ್ಲಿ ಮರುಪಾವತಿ ಮಾಡತಕ್ಕದ್ದು, [ಉದಾಹರಣೆಗೆ: ಹೃದಯ ರೋಗಕ್ಕೆ ಸಂಬಂಧಿಸಿದಂತೆ ಅನುದಾನ ಪತ್ರದ ಆಧಾರದ ಮೇಲೆ ಖಾಸಗಿ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಪಡೆದಿದ್ದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ದರದಲ್ಲಿ ಮರುಪಾವತಿ ಮಾಡಬಹುದಾಗಿದೆ.]

7. ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ / ಚಿಕಿತ್ಸಾಲಯಗಳಿಗೆ ಅಗತ್ಯವಿರುವ ಎಲ್ಲಾ ಔಷಧಿ, ರಾಸಾಯನಿಕ ಮೊದಲಾದವುಗಳನ್ನು ವಿಮಾ ವೈದ್ಯಾಧಿಕಾರಿಗಳು ವೈದ್ಯಕೀಯ ಅಧೀಕ್ಷಕರುಗಳು ನೀಡಿದ ಬೇಡಿಕೆ ಪತ್ರಗಳನುಸಾರ ಉನ್ನತಾಧಿಕಾರ ಸಮಿತಿಯು ಅವುಗಳನ್ನು ಖರೀದಿಸಲು ಅನುಮೋದನೆ ನೀಡುವುದರಿಂದ ಅಂತಹ ಔಷಧಿಗಳು ದಾಸ್ತಾವಿನಲ್ಲಿ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಅವುಗಳನ್ನು ಖರೀದಿಸಲು ವಿಮಾರೋಗಿಗಳು ಮಾಡಿದ ವೆಚ್ಚವನ್ನು ಮರುಪಾವತಿಸಬಹುದು.

8. ಉತ್ಕೃಷ್ಟ ಹಾಗೂ ತಜ್ಞ ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದ ಬಿಲ್ಲುಗಳನ್ನು ಹೊರತು ಪಡಿಸಿ, ಇತರೆ ಬಿಲ್ಲುಗಳಿಗೆ ಸಂಬಂಧಪಟ್ಟ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು ಸದರಿ ಕ್ಲೇಮುಗಳು ಉನ್ನತಾಧಿಕಾರ ಸಮಿತಿ ಅನುಮೋದಿಸಿ ಸರಬರಾಜು ಮಾಡಿರುವ ಔಷಧಿಗಳು ದಾಸ್ತಾನಿನಲ್ಲಿ ಲಭ್ಯವಿಲ್ಲ ಎಂಬುದನ್ನು ಖಚಿತಪಡಿಸಿಕೊಂಡ ನಂತರವೇ ಅಂತಹ ಬಿಲ್ಲುಗಳಿಗೆ ಮೇಲು ಸಹಿ ಮಾಡತಕ್ಕದ್ದು. ಕಾರಾವಿ ಚಿಕಿತ್ಸಾಲಯಗಳ ವಿಮಾ ವೈದ್ಯಾಧಿಕಾರಿಗಳು ಸಂಬಂಧಿಸಿದ ಕಾರಾವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಿಂದ ವೈದ್ಯಕೀಯ ವೆಚ್ಚದ ಮರುಪಾವತಿಗೆ ಸಂಬಂಧಿಸಿದ ಬಿಲ್ಲುಗಳಿಗೆ ಮೇಲು ಸಹಿ ಪಡೆದ ನಂತರವೇ ಮರುಪಾವತಿಗೆ ಕ್ರಮತೆಗೆದುಕೊಳ್ಳತಕ್ಕದ್ದು, ಕಾರಾವಿ ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ ಲೇ-ಕಾರ್ಯದರ್ಶಿಗಳು ಅರ್ಜಿ ಮೊತ್ತಕ್ಕೆ ಬಿಲ್ಲನ್ನು ತಯಾರಿಸಿ ವೈದ್ಯಕೀಯ ಅಧೀಕ್ಷಕರುಗಳಿಂದ ಮೇಲು ಸಹಿ ಪಡೆಯಬೇಕು.

9. ಉತ್ಕೃಷ್ಟ ಹಾಗೂ ತಜ್ಞ ವೈದ್ಯಕೀಯ ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ನಿರ್ದೇಶಕರು, ಕಾರಾವಿ ಇಲಾಖೆ ಇವರು ಪರಿಶೀಲಿಸಿ ಅರ್ಹ ವೈದ್ಯಕೀಯ ವೆಚ್ಚದ ಮರುಪಾವತಿಗೆ ಪ್ರಾದೇಶಿಕ ನಿರ್ದೇಶಕರಿಂದ ಧನಾದೇಶ ಪಡೆಯಲು ಶಿಫಾರಸ್ಸು ಮಾಡತಕ್ಕದ್ದು.

10. ಮೇಲ್ಕಂಡ ಷರತ್ತುಗಳಲ್ಲಿ ಹಾಗೂ ಇತರೆ ಏನಾದರೂ ನ್ಯೂನತೆಗಳೂ ಕಂಡುಬಂದಲ್ಲಿ ನಿರ್ದೇಶಕರು ಕಾರ್ಮಿಕರ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು, ಇವರ ಗಮನಕ್ಕೆ ತಂದು ಸ್ಪಷ್ಟೀಕರಣ ಪಡೆಯುವುದು.

(ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ10/2023- ಎಫ್ ಆರ್ / ಆಇ 96 ವೆಚ್ಚ -9/2023, ದಿನಾಂಕ: 05-06-2023ರನ್ವಯ ಹೊರಡಿಸಿದೆ.)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Vijaya.N 17/6/2023

**(ವಿಜಯ.ಎನ್)**
ಪೀಠಾಧಿಕಾರಿ-05,
ಕಾರಾವಿಯೋವೈ ಸೇವೆಗಳು,
ಕಾರ್ಮಿಕ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆಗಳು, ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010.
3. ಮಾನ್ಯ ಕಾರ್ಮಿಕ ಸಚಿವರ ಆಪ್ತಕಾರ್ಯದರ್ಶಿ, ಕಾರ್ಮಿಕ ಇಲಾಖೆ.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
5. ಸರ್ಕಾರದ ಉಪ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
6. ಹೆಚ್ಚುವರಿ ಪ್ರತಿ : ಶಾಖಾ ರಕ್ಷಾ ಕಡತ.